ಶ್ರೀ ಸಿ.ಚನ್ನಿಗಪ್ಪ : 1995ನೇ ಇಸವಿಯಲ್ಲಿ ಮಾನ್ಯ ಸಿಂಧ್ಯಾರವರಲ್ಲಿ ಇದು ಬೇಕು ಎಂದು ಹೇಳಿ ಕೇಳಿಕೊಂಡಿದ್ದೆ. ಮಾನ್ಯ ನಮ್ಮ ಎಸ್.ಪಿಯವರು ಮತ್ತು ಡಿಐಜಿಯವರನ್ನು ಇದನ್ನು ಮಾಡಿಕೊಡಬೇಕೆಂದು ಸರ್ಕಾರಕ್ಕೆ ಕೇಳಿದ್ದಾರೆ. ಆದಾಗ್ಯೂ ಸಹಾ ಅದು ಡಿಲೇ ಆಗಿದೆ. ದಯಮಾಡಿ ಇದನ್ನು ಈ ವರ್ಷವೇ ಮಂಜೂರು ಮಾಡಿಕೊಡಬೇಕೆಂದು ಕೇಳುತ್ತೇನೆ.

ಶ್ರೀ ಪಿ.ಜಿ.ಆರ್.ಸಿಂಧ್ಯಾ : ಇದನ್ನು ಕೊಡುವುದಾದರೆ ಈ ಫೈನಾನ್ಸ್ ಇಯರ್‌ನಲ್ಲಿ ಕನ್‌ಸಿಡರ್ ಮಾಡುತ್ತೇನೆ.

ಅಧ್ಯಕ್ಷರು : ಅವರು ಕೇಳುತ್ತಾರೆ, ಸಾಧ್ಯವಾದರೆ ಕೊಡಿ.

ಸಣ್ಣ ನೀರಾವರಿ ಇಲಾಖೆಯಿಂದ ದಾವಣಗೆರೆ ತಾಲ್ಲೂಕಿಗೆ ಖರ್ಚು ಮಾಡಿರುವ ಹಣ.

140 (1058) ಶ್ರೀ ಎಸ್.ವಿ.ರವೀಂದ್ರನಾಥ್ (ಮಾಯಗೊಂಡ) : ಮಾನ್ಯ ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ 1998-99ನೇ ಸಾಲಿನಲ್ಲಿ ಸಣ್ಣ ನೀರಾವರಿ ಇಲಾಖೆಯಿಂದ ವೆಚ್ಚ ಮಾಡಿದ ಒಟ್ಟು ಮೊಬಲಗು ಎಷ್ಟು ;

ಆ) ಆ ಪೈಕಿ, ದಾವಣಗೆರೆ ತಾಲ್ಲೂಕಿಗೆ ವೆಚ್ಚ ಮಾಡಿದ ಹಣವೆಷ್ಟು? (ವಿಧಾನ ಸಭಾಕ್ಷೇತ್ರವಾರು ವಿವರ ನೀಡುವುದು)

ಶ್ರೀ ತಿಪ್ಪೇಸ್ವಾಮಿ (ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಸಚಿವರು.) :

ಅ) ರಾಜ್ಯದಲ್ಲಿ 1998-99ರ ಸಾಲಿನಲ್ಲಿ ಖರ್ಚು ಮಾಡಿದ ವಿವರ:

ಉತ್ತರ ವಲಯ ದಿ: 31.1.99ಕ್ಕೆ	ದಕ್ಷಿಣವಲಯ ಜನವರಿ 98ರ ಅಂತ್ಯಕ್ಕೆ	ಒಟ್ಟು (ಲಕ್ಷ ರೂ.ಗಳಲ್ಲಿ)
4619.89	3663.24	8283.13

ಆ) ಈಪೈಕಿ, ದಾವಣಗೆರೆ ತಾಲ್ಲೂಕಿಗೆ 30.68 ಲಕ್ಷ ರೂ.ಗಳನ್ನು ವೆಚ್ಚ ಮಾಡಿದ್ದು, ಇದರ ವಿಧಾನ ಸಭಾ ಕ್ಷೇತ್ರವಾರು ವಿವರಗಳು ಕೆಳಕಂಡಂತಿವೆ:

ಕ್ರ. ಸಂ.	ವಿಧಾನ ಸಭಾ ಕ್ಷೇತ್ರದ	ಯೋಜನೆ ಹೆಸರು	ಯೋಜನೇತರ	ಒಟ್ಟು
1.	ದಾವಣಗೆರೆ	15.09	0.02	15.11
2.	ಮಾಯಕೊಂಡ	14.71	0.86	15.57
	ಒಟ್ಟು	**29.80**	**0.88**	**30.68**

ಈ ಮೊತ್ತದಲ್ಲಿ ವಿದ್ಯುಚ್ಛಕ್ತಿ ಬಿಲ್ಲುಗಳ ಬಾಬ್ತು ಸೇರಿರುತ್ತದೆ.

ಶ್ರೀ ಎಸ್.ವಿ.ರವೀಂದ್ರನಾಥ್ : ಮಾನ್ಯ ಅಧ್ಯಕ್ಷರೇ (ಅ)ಗೆ ಉತ್ತರದಲ್ಲಿ ಒಟ್ಟು 8283.13ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ ಎಂದು ಹೇಳುತ್ತಾರೆ. ನಮ್ಮ ದಾವಣಗೆರೆ ತಾಲ್ಲೂಕಿಗೆ ಒಟ್ಟು 30.68 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ ಎಂದು ಹೇಳಿ ದಾವಣಗೆರೆ ಮಾತ್ರ 15.09 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ ಎಂದು ಹೇಳುತ್ತಾರೆ. ದಾವಣಗೆರೆ ಅದು ನಗರ. ದಾವಣಗೆರೆ ನಗರದಲ್ಲಿ ಯಾವುದೂ ಸಣ್ಣ ನೀರಾವರಿ ಕರೆಗಳು ಬರುವುದಿಲ್ಲ. ನನ್ನ ಕ್ಷೇತ್ರ ಮಾಯಕೊಂಡಕ್ಕೆ 14.71 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ ಎಂದು ಹೇಳುತ್ತಾರೆ. ಅದರಲ್ಲಿ ವಿದ್ಯುಚ್ಛಕ್ತಿಯ ಬಿಲ್‌ಗಳು ಕೂಡ ಸೇರಿವೆ ಎಂದು ಹೇಳುತ್ತಾರೆ. ದಾವಣಗೆರೆ ನಗರಕ್ಕೆ ಖರ್ಚು ಮಾಡಿದ ಬಗ್ಗೆ ಮತ್ತು ಮಾಡುಕೊಂಡಕ್ಕೆ ಖರ್ಚು ಮಾಡಿರುವ ಬಗ್ಗೆ ಪ್ರತ್ಯೇಕವಾಗಿ ವಿವರ ನೀಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ತಿಪ್ಪೇಸ್ವಾಮಿ : ಮಾನ್ಯ ಅಧ್ಯಕ್ಷರೇ, ದಾವಣಗೆರೆ ತಾಲ್ಲೂಕಿಗೆ ಖರ್ಚಾಗಿರುವ ಹಣದ ಬಗ್ಗೆ ಕೇಳಿದ್ದರು. ಆ ವಿವರ ನನ್ನ ಹತ್ತಿರ ಸದ್ಯಕ್ಕೆ ಇಲ್ಲ. ಸನ್ಮಾನ್ಯ ಸದಸ್ಯರಿಗೆ ನಾಳೆಯೇ ಆ ವಿವರವನ್ನು ಕಳುಹಿಸಿಕೊಡುತ್ತೇನೆ.

ಸವದತ್ತಿ ತಾಲ್ಲೂಕಿನ ಚಿಕ್ಕಬೂದನೂರ ಗ್ರಾಮದ ನೀರಾವರಿ ಕಾಮಗಾರಿಗಳ ಸ್ಥಗಿತ

142 (709) ಶ್ರೀ ಕೌಜಲಗಿ ಮಹಂತೇಶ ಶಿವಾನಂದ (ಬೈಲಹೊಂಗಲ) : ಮಾನ್ಯ ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಳಗಾವಿ ಜಿಲ್ಲೆ ಸವದತ್ತಿ ತಾಲ್ಲೂಕಿನ ಚಿಕ್ಕ ಬೂದನೂರ ಗ್ರಾಮದ ನೀರಾವರಿ ಕೆರೆ ಕೆಲಸ ಸ್ಥಗಿತಗೊಂಡಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ :

ಆ) ಹಾಗಿದ್ದಲ್ಲಿ ಈ ಕೆಲಸವನ್ನು ಕೂಡಲೇ ಪ್ರಾರಂಭಿಸಲು ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?

ಶ್ರೀ ತಿಪ್ಪೇಸ್ವಾಮಿ (ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಸಚಿವರು) :

ಅ) ಬಂದಿದೆ.

ಆ) ಸದರಿ ಸ್ಥಗಿತಗೊಂಡಿರುವ ಕಾಮಗಾರಿಯನ್ನು ಪುನಃ ಪ್ರಾರಂಭಿಸಲು ಅಧೀಕ್ಷಕ ಅಭಿಯಂತರರು ಮೊದಲಿನ ಗುತ್ತಿಗೆದಾರರ ಗುತ್ತಿಗೆಯನ್ನು ರಿಸ್ಕ್ ಅಂಡ್ ಕಾಸ್ಟ್ ಆಧಾರದ ಮೇಲೆ ಮೊಟಕುಗೊಳಿಸುವ ಪ್ರಸ್ತಾವನೆಯನ್ನು ಸಲ್ಲಿಸಿದ್ದು, ಮುಖ್ಯ ಅಭಿಯಂತರರು, ಉತ್ತರ ವಲಯ, ಬಿಜಾಪುರರವರ ಪರಿಶೀಲನೆಯಲ್ಲಿ ಇದೆ. ಶೀಘ್ರವೇ ಬಾಕಿ ಉಳಿದ ಕಾಮಗಾರಿಗೆ ಮರು ಟೆಂಡರ್ ಕರೆದು ಕಾಮಗಾರಿ ಕೈಗೆತ್ತಿಕೊಳ್ಳಲು ಕ್ರಮ ಕೈಗೊಳ್ಳಲು ಸೂಕ್ತ ಸೂಚನೆಗಳನ್ನು ನೀಡಲಾಗುವುದು.

ಅಧ್ಯಕ್ಷರು : ಮಾನ್ಯ ತಿಪ್ಪೇಸ್ವಾಮಿಯವರೇ, ಮೊದಲು ಅವರಿಗೆ ಶುಭಾಶಯ ಹೇಳಿ. ಆ ಮೇಲೆ ಉತ್ತರ ಹೇಳಿ.